Indian Journal of History and Archaeology

ISSN (E):2582-225X
Vol-1 Issue 2, July- August 2019, Pp 31-40

# ಬಾದಾಮಿ ಚಾಲುಕ್ಯರ ಕಾಲದ ಗುಹಾಂತರ ಮತ್ತು ರಚನಾತ್ಮಕ ದೇವಾಲಯಗಳ ನಿರ್ಮಾಣ ಹಾಗೂ ಕೆಲವು ಆಯ್ದ ದೇವಾಲಯಗಳೊಂದಿಗೆ ವಿವರಣೆ

**ಡಾ.ಎಸ್.ಕೆ.ದೇವೇಗೌಡ**

**ಡಾ.ಎಸ್.ಕೆ.ದೇವೇಗೌಡ**
ಸಹಾಯಕ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು

ಕರ್ನಾಟಕದಲ್ಲಿ ಅಳ್ವಿಕೆ ಮಾಡಿದ ಅನೇಕ ರಾಜಮನೆತನಗಳಲ್ಲಿ ಒಂದಾದ ಬಾದಾಮಿ ಚಾಲುಕ್ಯರು ಬಹಳ ಪ್ರಸಿದ್ಧರು ಎಕೆಂದರೆ ಇವರ ಕಾಲಘಟ್ಟದಲ್ಲಿನ ಅಳ್ವಿಕೆ ಕೇವಲ ದಕ್ಷಿಣ ಭಾರತಕ್ಕೆ ಅಷ್ಟೇ ಸೀಮಿತವಾಗಿರದೇ ಉತ್ತರ ಬಾರತದವರೆವಿಗೂ ಸಹ ವಿಸ್ತರಿಸಿದ್ದು, ಅದರೊಂದಿಗೆ ಕರ್ನಾಟಕದಲ್ಲಿ ಕಲೆ ಮತ್ತು ವಾಸ್ತುಶಿಲ್ಪದ ಭದ್ರಬುನಾದಿಗೆ ನಾಂದಿ ಹಾಡಿದ ಕಾಲಘಟ್ಟವಾಗಿದೆ. ಅಲ್ಲದೇ ನಾವು ದೇವರ ಕಲ್ಪನೆಯ ಪ್ರಾರಂಭದ ಬಗ್ಗೆ ನೋಡಿದಾಗ ಮಾನವ ಪ್ರಾಚೀನ ಕಾಲದಿಂದಲೂ ದೈವ ಶಕ್ತಿಯೊಂದನ್ನು ರೂಪಿಸಿಕೊಂಡು ಅದರಲ್ಲಿ ಭಕ್ತಿ, ನಂಬಿಕೆ, ಭಯ ಹಲವು ಭಾವನೆಯನ್ನು ತನ್ನಲ್ಲಿ ಉಳಿಸಿಕೊಂಡು ಜೀವನ ನಡೆಸುತ್ತಾ ಬಂದಿದ್ದಾನೆ. ಈ ತರಹದ ಕಲ್ಪನೆಗಳು ದೇವರುಗಳಾಗಿ ಉಪಾಸಿಸುತ್ತ ಬದಲಾವಣೆಯಾಗಿ ಮುಂದೆ ಮೂರ್ತಿ ಪೂಜೆ, ದೇವಾಲಯಗಳ ನಿರ್ಮಾಣ ಮಾಡುತ್ತಾ ಬಂದಿರುವುದನ್ನು ನಾವು ಇಂದಿಗೂ ಸಹ ನೋಡಬಹುದು. ನಮ್ಮ ಪ್ರಾಚೀನ ವೇದಗಳಲ್ಲಿಯೇ ಮೂರ್ತಿ ಪೂಜೆ, ಯಜ್ಞ, ವೇದಿಗಳ ನಿರ್ಮಾಣ ಕ್ರಮ, ಬಳಸಲಾಗುವ ವಸ್ತುಗಳು, ಇಟ್ಟಿಗೆಗಳ ಆಕಾರ ಇತ್ಯಾದಿ ಮಾಹಿತಿ ದೊರೆಯುತ್ತವೆ. ಅಲ್ಲದೇ ಯಜ್ಞಯಾಗಾದಿಗಳ ಅಂತ್ಯದಲ್ಲಿ ದೇವತಾ ಶಕ್ತಿ, ಆವಾಹನೆ ಮಾಡಿದ ಕಳಸಗಳು ಮತ್ತು ಯಜ್ಞವೇದಿಗಳು ವಿಸರ್ಜಿತವಾಗುತ್ತಿದ್ದರಿಂದ ಅವುಗಳ ಅವಶೇಷಗಳು ದೊರೆಯುವುದಿಲ್ಲ.

ಈ ದೇವಾಲಯದ ರಚನೆ ಕುರಿತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಪ್ರಸ್ತಾಪವಿರುವುದರಿಂದ ಅವರಿಗೆ ದೇವಾಲಯ ನಿರ್ಮಾಣದ ಪರಿಚಯವಿದ್ದಿತು.

ಆದರೆ ನಮಗೆ ಕ್ರಿ.ಪೂ.2ನೇ ಶತಮಾನದ ಈಚೆಗೆ ನಿರ್ಮಾಣಗೊಂಡ ದೇವಾಲಯಗಳ ಅವಶೇಷಗಳನ್ನು ಗುರುತಿಸಲಾಗಿ ದೊರೆತಿವೆ. ಈ ರೀತಿ ಪ್ರಾರಂಭಗೊಂಡ ದೇವಾಲಯಗಳು ಕಾಲಕ್ರಮೇಣ ಬೆಳೆದು ಹಲವಾರು ಪ್ರಯೋಗಗಳಿಗೆ ಒಳಪಟ್ಟು ಸಾಕಷ್ಟು ಮಾರ್ಪಾಡುಗಳನ್ನು ಹೊಂದಿರುವುದು ಅಂದಿನ ಸಮಾಜದ ಎಲ್ಲಾ ಚಟುವಟಿಕೆಗಳಗೂ ಕೇಂದ್ರವಾಗಿದ್ದನ್ನು ಗುರುತಿಸಬಹುದಾಗಿದೆ.

ಕ್ರಿಸ್ತ ಶಕದ ಪ್ರಾರಂಭದ ವೇಳೆಗಾಗಲೇ ದೇವಾಲಯದ ನಿರ್ಮಾಣದ ಪರಿಚಯ ಕರ್ನಾಟಕದಲ್ಲಿದ್ದಿತು ಎಂಬುದಕ್ಕೆ ತಲಕಾಡಿನ ಉತ್ಖನನದಲ್ಲಿ ದೊರೆತ ಉದಾಹರಣೆಗಳವೆ. ಅದಾದ ನಂತರ ಮೌರ್ಯರ ಅವಶೇಷ ದೊರೆಯದಿದ್ದರೂ ಸಹ ಶಾಸನಗಳ ಪ್ರಕಾರ ಈ ಪ್ರದೇಶ ಮೌರ್ಯ ಸಾಮ್ರಾಜ್ಯದ ಭಾಗವಾಗಿರುವುದು ಎಂದು ಹೇಳುವುದಕ್ಕೆ ಶಾಸನಗಳು ದೊರೆಯುತ್ತವೆ. ನಂತರದಲ್ಲಿ ಬಂದಂತಹ ಶಾತವಾಹನರ ಕಾಲದಲ್ಲಿ ರಚನೆಯ ಅವಶೇಷಗಳು ಸನ್ನತಿ, ಐಹೊಳೆಯ ಗೌಡರ ಗುಡಿಯ ಕೆಳಗಿನ ಅವಶೇಷ ಮತ್ತು ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯದ ಅಧಿಷ್ಠಾನದ ಇತರ ಅವಶೇಷಗಳು ದೊರೆತಿವೆ. ನಂತರದಲ್ಲಿ ಕರ್ನಾಟಕವನ್ನು ಆಳಿದ ಉತ್ತರದಲ್ಲಿ ಬನವಾಸಿ ಕದಂಬರು ಮತ್ತು ದಕ್ಷಿಣದಲ್ಲಿ ತಲಕಾಡಿನ ಗಂಗರು, ದೇವಾಲಯಗಳ ನಿರ್ಮಾಣ ಮಾಡಿದುದ್ದನ್ನು ಶಾಸನಗಳು ಹಾಗೂ ತಾಳಗುಂದದ ಪ್ರಣವೇಶ್ವರ, ಬನವಾಸಿಯ ಮಧುಕೇಶ್ವರ ದೇವಾಲಯಗಳನ್ನು ಉದಾಹರಿಸಬಹುದು. ಹಾಗೆಯೇ ನಂತರ ಬಂದಂತಹ ಕರ್ನಾಟಕದ ಹಿರಿಮೆಯ ಮನೆತನವೆಂದರೇ ಬಾದಾಮಿ ಚಾಲುಕ್ಯರು ಇವರು ಕ್ರಿ.ಶ.500 ರಿಂದ 757ರವರೆಗೆ ಬಾದಾಮಿ(ವಾತಾಪಿ)ಯನ್ನು ರಾಜಧಾನಿಯಾಗಿ ಮಾಡಿಕೊಂಡು ಕರ್ನಾಟಕ ಮಾತ್ರವಲ್ಲದೇ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳ ಆಳ್ವಕೆಯನ್ನು ಮಾಡಿದಂತಹ ಕುರುಹುಗಳನ್ನು ಕಾಣಬಹುದು.

ಈ ದೇವಾಲಯದ ವಾಸ್ತು ಸಹ ಪ್ರಾರಂಭಿಕವಾಗಿ ಸರಳತೆಯಿಂದ ನಿರ್ಮಾಣವಾಗಿ ಕ್ರಮೇಣ ಅವಶ್ಯಕತೆಗಳಿಗೆ ಅನುಗುಣವಾಗಿ ಬೆಳೆದು ವಿಶಾಲವಾದ ದೇವಾಲಯಗಳಾಗಿ ಮಾರ್ಪಾಟಾಗಿ ಅದು ಹಲವು ಶೈಲಿಗಳಾಗಿ ಕವಲೊಡೆದು ಹಲವಾರು ಪ್ರಕಾರ, ಪ್ರಭೇದ ಹೊಂದಿದವು ಹಾಗೂ ನೈಸರ್ಗಿಕ ವಾತಾವರಣ, ಉಪಲಬ್ಧವಾಗುವ ಸಾಮಾಗ್ರಿಗಳು ಸ್ಥಳೀಯ ಅವಶ್ಯಕತೆಗಳ ಅಭಿರುಚಿ, ಹಲವು ಅಂಶಗಳ ಹಿನ್ನೆಲೆಯಲ್ಲಿ ಅವುಗಳನ್ನು ದ್ರಾವಿಡ, ನಾಗರ ಮತ್ತು ವೇಸರ ಶೈಲಿಗಳಾಗಿ ಪರಿಚಯಾತ್ಮಕವಾಗಿರುವುದನ್ನು ಕಾಣಬಹುದು. ಈ ರೀತಿ ಪರಿಚಯವಾದಂತಹ ಶೈಲಿಗಳಲ್ಲಿ ದಕ್ಷಿಣ ಭಾರತದಲ್ಲಿ ದ್ರಾವಿಡ ಎಂಬ ಸಂಪ್ರದಾಯ ಶೈಲಿ ಬಹು ಪ್ರಸಿದ್ಧಿ ಪಡೆದಿದೆ. ದ್ರಾವಿಡ ಎಂದರೇ ವಿಂಧ್ಯಾಚಲದ ದಕ್ಷಿಣಕ್ಕಿರುವ ಇಡೀ ಭೂಪ್ರದೇಶವಾಗಿದ್ದರೂ ಸಹ ತಮಿಳು ಸಂಪ್ರದಾಯಕ್ಕೆ ಸಮಾನಾರ್ಥಕವಾಗಿ ಬಳಸಲಾಗುವುದೆಂದು ಅಭಿಪ್ರಾಯವಿದೆ. ಹೀಗಾಗಿ ಇಂದಿನ

ಕರ್ನಾಟಕ, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡುಗಳೊಂದಿಗೆ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳು ದ್ರಾವಿಡವೆನಿಸುತ್ತದೆ.

ಈ ಬಾದಾಮಿ ಚಾಲುಕ್ಯರ ದೇವಾಲಯಗಳು ಬಾದಾಮಿ, ನಾಗರಾಳ, ಪಟ್ಟದಕಲ್ಲು, ಐಹೊಳೆ ಇತ್ಯಾದಿಗಳಿಗೆ ಸೀಮಿತವಾಗಿರದೇ ಹೊರಗಿನ ಆಂಧ್ರಪ್ರದೇಶದ ಮೆಹಬೂಬ್ ನಗರ ಜಿಲ್ಲೆಯ ಆಲಂಪುರ, ಕರ್ನೂಲು ಜಿಲ್ಲೆಯ ಸತ್ಯವೋಲು ಮತ್ತು ಮಹಾನಂದಿಗಳಲ್ಲಿಯು ದೇವಾಲಯ ನಿರ್ಮಿಸಿದ್ದಾರೆ. ಐಹೊಳೆಯಲ್ಲಿ 125 ಗುಡಿಗಳಿದ್ದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯವರು ಇದನ್ನು 22 ಗುಂಪುಗಳಾಗಿ ವಿಂಗಡಿಸಿದ್ದಾರೆ. ಬಾದಾಮಿಯಲ್ಲಿ 20, ಪಟ್ಟದಕಲ್ಲಿನಲ್ಲಿ 12, ಮಂಕುಂದದಲ್ಲಿ 10, ನಾಗರಾಳದಲ್ಲಿ 1, ಆಂಧ್ರಪ್ರದೇಶದ ಆಲಂಪುರದಲ್ಲಿ 9, ಸತ್ಯವೋಲು ಮತ್ತು ಮಹಾನಂದಿಗಳಲ್ಲಿ ಒಂದೊಂದು ಹೀಗೆ ಸುಮಾರು 129 ಗುಡಿಗಳು ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳಾಗಿದ್ದು ಅಲ್ಲದೇ ಇವರ ಪ್ರಭಾವಕ್ಕೊಳಪಟ್ಟು ಸಮಕಾಲೀನ ಗುಡಿಗಳೂ ಸೇರಿದಂತೆ ಸುಮಾರು 200 ಆಗಬಹುದು. ಧಾರ್ಮಿಕವಾಗಿ ಪರಿಶೀಲಿಸಿದರೆ ಒಂದು ಜೈನ ಮತ್ತು ಬೌದ್ಧ ಹೊರತುಪಡಿಸಿ, ಉಳಿದೆಲ್ಲವು ಹಿಂದೂ ಧರ್ಮಕ್ಕೆ ಸೇರಿದವಾಗಿವೆ.

ಇವರ ದೇವಾಲಯ ನಿರ್ಮಾಣಕ್ಕೆ ಬೇಕಾದ ಮುಖ್ಯ ಆಕರ ಕಲ್ಲುಗಳು ಬಹುಮಟ್ಟಿಗೆ ಬಿಜಾಪುರ–ಬಾದಾಮಿಯ ಪರಿಸರದ ಪ್ರಾಂತ್ಯದ ನಸುಗೆಂಪು ಅಥವಾ ತಿಳಿಹಳದಿ ಬಣ್ಣದ ಮರಳುಗಲ್ಲಾಗಿವೆ. ಇವರು ಚಪ್ಪಡಿಯಂತಹ ದೊಡ್ಡ ಕಲ್ಲುಗಳನ್ನು ಕಂಬ ತೊಲೆಗಳಾಗಿ ಬಳಸಿರುವುದು, ಚಪ್ಪಡಿಗಳನ್ನು ಛಾವಣಿಗಾಗಿ ಕವಚುವುದು ಇವರ ಸಾಮಾನ್ಯ ವಾಸ್ತುವಿಧಾನವಾಗಿದೆ. ಅದರೆ ದಕ್ಷಿಣ ಭಾರತದ ಚಾಲುಕ್ಯ ಪೂರ್ವದಲ್ಲಿ ಮರ ಮತ್ತು ಇಟ್ಟಿಗೆಯ ಕಟ್ಟಡಗಳಿಗಾಗಿ ಬಳಸುತ್ತಿದ್ದ ಕಾಲದಲ್ಲಿ ಕಲ್ಲಿನ ಚಪ್ಪಡಿ ಉಪಯೋಗಿಸಿ ದೇವಾಲಯ ನಿರ್ಮಿಸುವುದನ್ನು ಕಂಡುಕೊಂಡುದೇ ಇವರ ಅತಿಶಯ ವಿಷಯವಾಗಿದೆ.

ಬಾದಾಮಿ ಚಾಲುಕ್ಯರು ಗುಹಾಂತರ ದೇವಾಲಯಗಳಿಂದ ರಚನಾತ್ಮಕ ದೇವಾಲಯಗಳ ನಿರ್ಮಾಣದ ಕಡೆಗೆ ವಾಸ್ತುಶಿಲ್ಪ ಮತ್ತು ಶಿಲ್ಪ ನಡುವಣ ಪಥವನ್ನು ಬದಲಾಯಿಸುವುದರ ಮೂಲಕ ದಕ್ಷಿಣ ಭಾರತದಲ್ಲಿಯೇ ಒಂದು ಅತ್ಯುನ್ನತ ಕಲೆ ಮತ್ತು ವಾಸ್ತುಶಿಲ್ಪ ಬುನಾದಿ ಹಾಕಿದರು ಎಂದರೇ ತಪ್ಪಾಗಲಾರದು. ಹಾಗಾಗಿ ಬಾದಾಮಿ ಚಾಲುಕ್ಯರ ಇತರ ಮನೆತನ ರಾಜರಿಗಿಂತ ಭಿನ್ನವಾದ ವಾಸ್ತುಶಿಲ್ಪಗಳನ್ನು ಹೊಂದಿರುವುದು ಅವರ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ನಾವು ಗುರುತಿಸಬಹುದು. ಈ ದೃಷ್ಟಿಯಲ್ಲಿ ಅವರ ಕಲೆ ಮತ್ತು ವಾಸ್ತುಶಿಲ್ಪದ ಕೆಲವು ಲಕ್ಷಣಗಳನ್ನು ನಾವು ಕೆಳಗಿನಂತೇ ಕಾಣಬಹುದಾಗಿದೆ.

**ಗುಹಾವಾಸ್ತು ದೇವಾಲಯಗಳು:**

ಇವರ ಆರಂಭದ ಗುಹಾವಾಸ್ತು ಶೈಲಿಯ ಮುಂದಿನ ಹೆಜ್ಜೆಯಾಗಿ ಸ್ತಂಭಗಳನ್ನೊಳಗೊಂಡ ಮಂಟಪ ದೇವಾಲಯಗಳು ತಲೆ ಎತ್ತಿದವು. ಇದರಲ್ಲಿ ಮೇಲ್ಛಾವಣಿ ಕಟ್ಟಡಗಳು ಗುಹಾವಾಸ್ತು ಶೈಲಿಯಲ್ಲಿ ಹೋಲುತ್ತವೆ. ಇವರು ಮಂಟಪ ಶೈಲಿಯ ಸಾಂಧಾರಗುಡಿಗಳ, ಹಾಗೂ ಅಧಿಷ್ಠಾನ ಮಂಚ ಬಂಧದಲ್ಲಿದ್ದರೆ ಒಳಗಿನ ಗರ್ಭಗೃಹದ ಅಧಿಷ್ಠಾನ ಪದ್ಮಬಂದದಲ್ಲಿದೆ.

ಇವರು ದೇವಾಲಯ ಪೂರ್ವಕ್ಕೆ ಮುಖ ಮಾಡಿದ್ದು 3–4 ಅಡಿ ಎತ್ತರ ಜಗತಿಯ ಮೇಲಿವೆ. ಗರ್ಭಗುಡಿ, ಸುಖನಾಸಿ, ನವರಂಗ (ರಂಗಮಂಟಪ), ಮುಖಮಂಟಪ, ಸರ್ವಸಾಮಾನ್ಯವಾಗಿ ದೇವಾಲಯ ಮೇಲ್ಛಾವಣಿ ಮಟ್ಟ ಸಮವಾಗಿವೆ. ಪ್ರಾರಂಭದ ದೇವಾಲಯದಲ್ಲಿ ಗರ್ಭಗೃಹದ ಮೇಲೆ ಶಿಖರ ನಂತರ ಬೇರೆ ಬೇರೆಯಲ್ಲಿ ಶಿಖರಗಳು ರಚನೆಯಾದವು. ಇವರ ಭಿತ್ತಿಗಳು ವೈವಿಧ್ಯಮಯವಾದ ಕೆತ್ತನೆಯ ಮೂರ್ತಿಶಿಲ್ಪಗಳಿಂದ ಕೂಡಿವೆ. ಪ್ರಮುಖವಾಗಿ ನಾಗರ ಮತ್ತು ದ್ರಾವಿಡ ಶೈಲಿಯನ್ನು ಒಳಗೊಂಡ ವೇಸರ ಶೈಲಿಯ ಅವಿಷ್ಕಾರವಿದೆ.ಮರಳುಕಲ್ಲಿನ ಬದಲಿಗೆ ಪಚ್ಚೆಯ ಇಲ್ಲವೇ ಕರ್ನೂಲ್ ಕಲ್ಲನ್ನು ಬಳಸಿರಬೇಕು. ಭಿತ್ತಿಯ ಜಾಲಾಂಧ್ರವು ವಿಶಾಲವಾಗಿದ್ದು ಇದರ ಮೇಲೆ ಮಕರತೋರಣ, ನಾಸಿಗಳ ಅಲಂಕರಣವಿರುತ್ತದೆ. ಇದರ ಸ್ತಂಭಗಳು ರುಚಿರ ಎಂದು ವರ್ಣಿಸಲಾದ ಗುಂಪಿಗೆ ಸೇರಿದ್ದು ಚೌಕಾಕಾರದ ಕಂಬಗಳ ಕೆಳಗೆ ಅಡ್ಡಪಟ್ಟಿಕೆಗಳು ಮೇಲ್ಭಾಗದಲ್ಲಿ ಅರ್ಧ ಅಥವಾ ಪೂರ್ಣ ಪದಕಗಳಲ್ಲಿರುತ್ತದೆ. ಒಟ್ಟಾರೆಯಾಗಿ ಚಾಳುಕ್ಯರ ವಾಸ್ತುಶಿಲ್ಪವನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ. ಅದರಲ್ಲಿ ಗುಹಾಲಯಗಳು ಮತ್ತು ರಚನಾತ್ಮಕ ದೇವಾಲಯಗಳು.

## ಗುಹಾಂತರ ದೇವಾಲಯಗಳು ವಿವರಣೆ

ಇದರಲ್ಲಿ 4 ಗುಹಾಲಯಗಳು ಪ್ರಮುಖವಾಗಿ ಬಾದಾಮಿಯಲ್ಲಿದ್ದು ಇವು ಒಂದನೇ ಕೀರ್ತಿವರ್ಮ ಮತ್ತು ಮಂಗಳೇಶ್ವರರು ನಿರ್ಮಿಸಿದರು. ಇವಗಳನ್ನು ಒಂದೇ ಬಂಡೆಯಲ್ಲಿ ಕೊರೆದು ನಿರ್ಮಿಸಲಾಗಿದೆ. ವಿಸ್ತಾರದಲ್ಲಿ ಹೆಚ್ಚು ಕಡಿಮೆ ಇದ್ದರೂ ತಲವಿನ್ಯಾಸ ಮತ್ತು ಹೊರನೋಟದಲ್ಲಿ ಒಂದೇ ಮಾದರಿಯಲ್ಲಿವೆ. ಹಾಗೂ ಗರ್ಭಗುಡಿ, ನವರಂಗ (ರಂಗಮಂಟಪ), ಮುಖಮಮಂಟಪವನ್ನು ಹೊಂದಿದೆ.

ಒಂದನೇ ಗುಹಾಲಯ ಶೈವ ಗುಹೆಯಾಗಿದ್ದು 4 ಸುಂದರ ಕಂಬಗಳೊಂದಿಗೆ L ಆಕಾರದಲ್ಲಿದೆ. ಇದರ ಒಳಗಿನ ಕಂಬಗಳು ಬೋದಿಗೆ, ಚಾಚುಪೀಠ ಮತ್ತು ಮೇಲ್ಛಾವಣಿಯಲ್ಲಿ ಶಿಲ್ಪಗಳು ಸುಂದರವಾಗಿದೆ. ಇದರಲ್ಲಿ ನಟರಾಜ, ಅರ್ಧನಾರೀಶ್ವರ, ತ್ರಿಭಂಗಿಯಲ್ಲಿರುವ ಮಹಿಷಾಸುರ ಮರ್ದಿನಿ, ಹಾರುವ ಭಂಗಿಯಲ್ಲಿರುವ ಗಂಧರ್ವರು, ಐದು ಹೆಡೆಗಳ ನಾಗಶಿಲ್ಪ, ಶಿವನ ಲೀಲೆಗಳು, ಗಣಪತಿ ಶಿಲ್ಪಗಳಿವೆ. ಅಲ್ಲದೇ ಮೇಲ್ಛಾವಣಿಯಲ್ಲಿ ವರ್ಣಚಿತ್ರಗಳು,

ಎರಡನೇ ಗುಹಾಲಯ ವೈಷ್ಣವ ಪಂಥವಾಗಿದ್ದು, ಇದರ ಹಜಾರ 33 ಅಡಿಯಿದ್ದು ನಾಲ್ಕು ಕಂಬಗಳಿಂದ ಕೂಡಿದೆ. ಇದರಲ್ಲಿ ರಂಗಮಂಟಪ, 4 ಕಂಬಗಳ 5 ಸಾಲುಗಳಿವೆ. ಮೇಲ್ಛಾವಣಿಯಲ್ಲಿ ಸಣ್ಣ ಶಿಲ್ಪಗಳು, ನಾಲ್ಕು ವರ್ಣಚಿತ್ರಗಳಿವೆ, ಅಲ್ಲದೇ ತ್ರಿವಿಕ್ರಮ, ವರಾಹ, ವಾಮನ ಮೊದಲಾದ ವಿಷ್ಣು ಲೀಲೆಗಳನ್ನು ಕೆತ್ತಲಾಗಿದೆ.

ಮೂರನೇ ಗುಹೆಯ ಸಹ ವೈಷ್ಣವ ಪಂಥವಾಗಿದ್ದು, ಇದು ಉಳಿದೆಲ್ಲಕ್ಕಿಂತ ದೊಡ್ಡದು. ಇದನ್ನು ಮಂಗಳೇಶನು ಕ್ರಿ.ಶ.578ರಲ್ಲಿ ನಿರ್ಮಿಸಿದನೆಂದು ಶಾಸನದಿಂದ ತಿಳಿಯುತ್ತದೆ. ಮುಖಮಂಟಪದಲ್ಲಿ 14 ಕಂಬಗಳಿದ್ದು ಇವು ಬಹುಕೋನದಿಂದ ಕೂಡಿದೆ. ಪಶ್ಚಿಮ ಭಿತ್ತಿಯಲ್ಲಿ 5 ಹೆಡೆಗಳ ಆದಿಶೇಷ ಎನ್ನುವ ವಿಷ್ಣು ಶಿಲ್ಪವಿದೆ. ಅಲ್ಲದೇ ವರಹ, ನರಸಿಂಹ, ವಾವನ, ಹರಿಹರ, ಭೂದೇವಿ ಶಿಲ್ಪಗಳು.

ನಾಲ್ಕನೇ ಗುಹೆ ಜೈನ ಪಂಥವಾಗಿ ಆದಿ ತೀರ್ಥಂಕರನಾದ ಪಾರ್ಶ್ವನಾಥನ ಗುಹೆ. ಇದು ಚಿಕ್ಕದಾಗಿದ್ದು "ಮೇಗಣ ಬಸದಿ" ಎಂದು ಕರೆಯುತ್ತಾರೆ. ಇಲ್ಲಿ ತಾವರೆ ಪುಷ್ಪದ ಮೇಲೆ ನಿಂತಿರುವ ಬಾಹುಬಲಿ ಪ್ರತಿಮೆಯಿದೆ. ಗರ್ಭಗೃಹದಲ್ಲಿ ಕುಳಿತ ಮಹಾವೀರನ ಮೂರ್ತಿ, ಭಿತ್ತಿಯಲ್ಲಿ ಅನೇಕ ತೀರ್ಥಂಕರ, ಯಕ್ಷಯಕ್ಷಿಣಿಯರ ಶಿಲ್ಪಗಳಿವೆ. ಕ್ರಿ.ಶ.6ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಈ ನಾಲ್ಕು ಗುಹಾಂತರ ದೇವಾಲಯಗಳು ನಿರ್ಮಾಣವಾಗಿದ್ದು ಪ್ರಾಚೀನ ಕಾಲದ್ದಾಗಿವೆ.

**ರಚನಾತ್ಮಕ ದೇವಾಲಯಗಳ ವಿವರಣೆಗಳು:**

ಇವರ ದೇವಾಲಯಗಳು ಅತಿ ಪ್ರಾಚೀನವೆನಿಸಿದ್ದು ಬಾದಾಮಿ ಮೇಲಿನ ಮತ್ತು ಕೆಳಗಿನ ಶಿವ ದೇವಾಲಯಗಳು, ಇದರ ಕೆಳಗಿನ ಶಿವ ದೇವಾಲಯ ಬಹುಶಃ ಮೊದಲು ವಿಷ್ಣುವಿನ ದೇವಾಲಯವಾಗಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಈಗ ಇದು ಕೇವಲ ಗರ್ಭಗೃಹವನ್ನು ಹೊಂದಿದೆ. ಇದರ ಗರ್ಭಗುಡಿಯ ದ್ವಾರಶಾಖೆಯಲ್ಲಿ ಕುಬ್ಜ ದ್ವಾರಪಾಲಕರಿದ್ದಾರೆ. ಗರ್ಭಗುಡಿಯ ಮೇಲೆ ನಾಗರ ಶೈಲಿಯ ಶಿಖರವಿದ್ದು ಅಧಿಷ್ಠಾನದ ಪಟ್ಟಿಕೆಗಳಲ್ಲಿ ರಾಮಾಯಣ, ಕೃಷ್ಣಲೀಲೆಗಳಿಂದಾಯ್ದ ಘಟನೆಗಳ ಉಬ್ಬುಶಿಲ್ಪಗಳನ್ನು ಚಿತ್ರಿಸಲಾಗಿದೆ. ಹೊರಭಿತ್ತಿಯಲ್ಲಿ ಗೋವರ್ಧನಧಾರಿ ಕೃಷ್ಣ, ಕಾಳಿಂಗ ಮರ್ಧನ ಕೃಷ್ಣ ಮತ್ತು ಷಡ್ಬಾಹು ನರಸಿಂಹ ಮೂರ್ತಿ ಶಿಲ್ಪಗಳಿವೆ.

**ಮಾಲೆಗಿತ್ತಿ ಶಿವ ದೇವಾಲ*ಯ* ಬಾದಾಮಿ;**

ಇದರ ಕಾಲದ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. ಇದರಲ್ಲಿ ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಇದರ ಶಿಖರ ದ್ರಾವಿಡ ಮಾದರಿಯದ್ದಾಗಿದೆ. ಗರ್ಭಗೃಹ ಚೌಕಾಕಾರವಾಗಿದೆ. ಭಿತ್ತಿಯಿಲ್ಲದೇ ದಪ್ಪವಾದ ಕಂಬಗಳನ್ನು ಹೊರ ಅಲಂಕರಿಸುವ ಮೂಲಕ ರಚಿಸಿವೆ. ಗರ್ಭಗೃಹದ ಮೇಲಿನ

ಶಿಖರ, ಮೆಟ್ಟಿಲು ಮೆಟ್ಟಿಲಾಗಿ ಮೇಲೆರಿದೆ. ಅಧಿಷ್ಠಾನ ಭಾಗವು ಜಗತಿ, ಉಪಾನ, ಕುಮುದ, ಗಳ, ಅಡ್ಡಪಟ್ಟಿಕೆಗಳಿವೆ. ಸಭಾಮಂಟಪದ ಹೊರಗೋಡೆಯ ಕೋಷ್ಠಗಳಲ್ಲಿ ಶಿವ, ವಿಷ್ಣು, ದ್ವಾರಪಾಲಕರ ವಿಗ್ರಹಗಳಿವೆ. ಗರ್ಭಗೃಹದ ದ್ವಾರಬಂಧದಲ್ಲಿ ನಟರಾಜ ಶಿಲ್ಪ ಮತ್ತು ಒಳಭಾಗ ಶಿವಲಿಂಗವಿದ್ದು, ಶಾಸನವನ್ನು ಸಹ ಖಂಡರಿಸಲಾಗಿದೆ. ಒಟ್ಟಾರೆಯಾಗಿ ವಿದ್ವಾಂಸರ ಪ್ರಕಾರ 7ನೆಯ ಶತಮಾನದ ಕೊನೆಯ ಭಾಗದ್ದೆಂಬ ಅಭಿಪ್ರಾಯವಿದೆ.

**ಲಾಡಖಾನ್ ದೇವಾಲಯ:**

ಇದು ಕ್ರಿ..450ರಲ್ಲಿ ನಿರ್ಮಾಣವಾದ ಮತ್ತು ಬಾದಾಮಿಯ ಪ್ರಾಚೀನ ದೇವಾಲಯವೆಂದು ವಿದ್ವಾಂಸರ ಅಭಿಪ್ರಾಯ ವ್ಯಕ್ತವಾದರೂ ಸಹ ಇದನ್ನು ಇನ್ನೂ ಕೆಲವು ವಿದ್ವಾಂಸರು ಕ್ರಿ.ಶ.600–700 ಕಾಲದ್ದಾಗಿರಬಹುದೆಂದಿದ್ದಾರೆ. ಇದು ಒಂದು ಸಭಾಮಂಟಪವಿದ್ದಂತಿರುವ ಗುಡಿ. ಒಳಭಾಗ ಗುಹಾಲಯದ ರೀತಿಯಲ್ಲಿ ಭಾಸವಾಗುತ್ತದೆ. ಇದರ ಗರ್ಭಗೃಹ ಆಯತಾಕಾರವಾಗಿದ್ದು ದೊಡ್ಡ ಪಡಸಾಲೆಯ ಹಿಂದಿನ ಗೋಡೆಗೆ ಹೊಂದಿಕೊಂಡಂತೆ ನಿರಾಧಾರವಾಗಿದೆ. ಗರ್ಭಗೃಹದ ದ್ವಾರದ ಮೇಲೆ ಪುರುಷಾಕಾರದ ಗರುಡ ವಿಗ್ರಹವಿದೆ. ಆದರೆ ಇದು ಶಿವಾಲಯವಾಗಿದ್ದು, ಒಳಗೆ ಲಿಂಗವಿದೆ. ಇಂದೂ ಶೈವ ದೇವಾಲಯವಾದರೂ ಪ್ರಾಚೀನ ವಿಷ್ಣು ದೇವಾಲಯವಾಗಿರಬಹುದೆಂಬ ಅಭಿಪ್ರಾಯವಿದೆ. ಅಲ್ಲದೇ ಪ್ರಸ್ತುತ ಇದನ್ನು ಲಾಡಖಾನ್ ಎಂದು ಕರೆಯಲಾಗುತ್ತಿದ್ದು, ಇಲ್ಲಿ ಲಾಡಖಾನ್ ಎಂಬ ಮುಸ್ಲಿಂ ಸಾಧು ವಾಸವಾಗಿದ್ದರಿಂದ ಇದಕ್ಕೆ ಈ ಹೆಸರಾಯಿತು ಮತ್ತು ಇದು ಗುಪ್ತರ ಕಲಾ ಶೈಲಿಯನ್ನು ಸಹ ಹೋಲುತ್ತದೆ. ಮಂಟಪದ ಮಧ್ಯಭಾಗದಲ್ಲಿ ಗರ್ಭಗೃಹಕ್ಕೆ ಎದುರಾಗಿ ಕಲ್ಲಿನ ನಂದಿ ವಿಗ್ರಹವಿದೆ. ಇಲ್ಲಿನ ಕಂಬಗಳು ಚಚ್ಚೌಕಾರವಾಗಿ, ದುಂಡಗೆ ಮತ್ತು ಅಷ್ಟಕೋನಾಕೃತಿಯಾಗಿವೆ. ಇದರ ಮೇಲೆ ಬೋದಿಗೆ ಚಾಚುಪೀಠಗಳಿವೆ. ಗರ್ಭಗೃಹದ ಮೇಲಿನ ಮಾಳಿಗೆಯಲ್ಲಿ ಮತ್ತೊಂದು ಗರ್ಭಗೃಹದ ರೀತಿಯ ಶಿಖರ ದೇವಾಲಯವಿದೆ. ಪಡಸಾಲೆಯ ಗೋಡೆಗಳಲ್ಲಿ ಜಾಲಂಧ್ರಗಳಿವೆ. ನಂತರದ ಮುಖಮಂಟಪ ಎರಡು ಕಂಬಗಳಿಂದ ಕೂಡಿ ಸರಳವಾಗಿವೆ.

**ದುರ್ಗಾ ದೇವಾಲಯ ಐಹೊಳೆ:**

ಇದು ಅಸಾಮಾನ್ಯ ರೀತಿಯಿದ್ದು ಬೌದ್ಧರ ಚೈತ್ಯಾಲಯದ ಮಾದರಿಗಳನ್ನು ಹೋಲುವ ಗಜಪೃಷ್ಠಾಕೃತಿ ವಿನ್ಯಾಸದಲ್ಲಿದ್ದು ಸು.ಕ್ರಿ.ಶ.600ಕ್ಕೂ ಹಿಂದಿನದೆಂದೂ ವಿದ್ವಾಂಸರ ಅಭಿಪ್ರಾಯವಾಗಿದೆ. ವೇಸರ ಶೈಲಿಯ ಶಿಖರ ಹೊಂದಿರುವ ಇದು ಕುದುರೆ ಲಾಳಾಕಾರದ ತಲವಿನ್ಯಾಸದಲ್ಲಿ 4 ಅಡಿ ಉದ್ದ, 30 ಅಡಿ ಎತ್ತರವಾದ ಕಟ್ಟೆಯ ಮೇಲೆ ಮೆಟ್ಟಿಲು ಹತ್ತಿ ನಡೆದರೆ ವೇದಿಕೆಯಿದೆ. ಇದು ಗರ್ಭಗೃಹ, ನವರಂಗ, ಮುಖಮಂಟಪವಿದೆ. ನವರಂಗ, ಮುಖಮಂಟಪವಿದೆ. ನವರಂಗ, ಸಭಾಮಂಟಪ ಮತ್ತು ಗರ್ಭಗೃಹ ಸುತ್ತ ಸುತ್ತು ಮಂಟಪವಿದ್ದು ಇದು 33 ಕಂಬಗಳಿಂದ ಕೂಡಿವೆ. ನವರಂಗದ ಭಿತ್ತಿಯಲ್ಲಿನ ಕೋಷ್ಠಕದಲ್ಲಿ

ನರಸಿಂಹ, ವರಾಹ, ಅರ್ಧನಾರೀಶ್ವರ, ಮಹಿಷಾಸುರ ಮರ್ದಿನಿ, ಗರುಡ, ವಿಷ್ಣು ಮೊದಲಾದ ದೇವತಾ ಶಿಲ್ಪಗಳಿವೆ. ಮುಖಮಂಟಪದ ನಾಲಕು ಕಂಬಗಳಲ್ಲಿ ಪ್ರಣಯಾಸಕ್ತ ದಂಪತಿಗಳ ಚಿತ್ರಗಳಿವೆ.

**ವಿರೂಪಾಕ್ಷ ದೇವಾಲಯ ಪಟ್ಟದಕಲ್ಲು ;**

ಲೋಕೇಶ್ವರ ಎಂದು ಕರೆಯುವ ಪಟ್ಟದಕಲ್ಲಿನ ಅತ್ಯಂತ ದೊಡ್ಡ ಗುಡಿ. ಎರಡನೇ ವಿಕ್ರಮಾದಿತ್ಯನ ರಾಣಿ ಲೋಕಮಹಾದೇವಿ ತನ್ನ ಪತಿ ಪಲ್ಲವರ ಮೇಲೆ ಪಡೆದ ದಿಗ್ವಿಜಯದ ನೆನಪಿಗೆ ನಿರ್ಮಿಸಿದಳು. ಇದರ ನಿರ್ಮಾಪಕ ಸ್ಥಪತಿಗಳು ಸರ್ವಸಿದ್ಧಿ ಮತ್ತು ಗುಂಡಾಚಾರಿ. ಗರ್ಭಗೃಹ, ಸುಖನಾಸಿ, ನವರಂಗ (ಮುಖಮಂಟಪ), ಮುಖಮಂಟಪಗಳು ಕೂಡಿದೆ. ಪ್ರವೇಶ ದ್ವಾರದ ಮುಂದೆ ದೊಡ್ಡ ನಂದಿ ವಿಗ್ರಹವಿರುವ ಮಂಟಪವಿದೆ. ಇದನ್ನು ಪರ್ಸಿಬ್ರೌನ್ ಅವರು ದ್ರಾವಿಡ ವಾಸ್ತುಶಿಲ್ಪದ ಅತ್ಯುತ್ತಮ ಕೃತಿ ಎಂದಿದ್ದಾರೆ. ಗರ್ಭಗೃಹದಲ್ಲಿ ಶಿವಲಿಂಗ, ಸಭಾಮಂಟಪದಲ್ಲಿ ಕಂಬಗಳ ಮೇಲೆ ಕಾವ್ಯಗಳು, ಹರಿವಂಶ, ಪಂಚತಂತ್ರ ಕೆಲವು ಕಥಾನಕಗಳು ವಿತಾನದಲ್ಲಿ ನಂದಿಯೊಡಗೂಡಿದ ಪಾರ್ವತೀ ಪರಮೇಶ್ವರ ಉಬ್ಬುಶಿಲ್ಪಗಳು ಮತ್ತು ಮುಖಮಂಟಪದ ಕಂಬಗಳ ಮೇಲೆ ಗರುಡ ಮತ್ತು ವಿಷ್ಣುವಿನ ಉಬ್ಬುಶಿಲ್ಪಗಳಿವೆ. ಈ ದೇವಾಲಯ ಭಿತ್ತಿ ಮತ್ತು ನಂದಿಮಂಟಪ ಶಿಥಿಲವಾಗಿರುವುದನ್ನು ಕಾಣಬಹುದು.

ಪಟ್ಟದಕಲ್ಲಿನಲ್ಲಿ ಇದಲ್ಲದೇ ಗಳಗನಾಥ, ಜಂಬುಲಿಂಗ ಕಾಡು ಸಿದ್ದೇಶ್ವರ ಮತ್ತು ಕಾಶಿ ವಿಶ್ವೇಶ್ವರ ನಾಗರ ರೇಖಾ ವಿನ್ಯಾಸದಲ್ಲಿವೆ. ಈ ರೀತಿಯಲ್ಲಿ ಚಾಳುಕ್ಯ ವಾಸ್ತುಶಿಲ್ಪದ ತವರಾದ ಪಟ್ಟದಕಲ್ಲಿನಲ್ಲಿ 10 ಪ್ರಮುಖ ದೇವಾಲಯಗಳಿದ್ದು ಇದನ್ನು ವಿಶ್ವಸಂಸ್ಥೆ 1987ರಲ್ಲಿ ವಿಶ್ವಪರಂಪರೆ ತಾಣವಾಗಿ ಅಂಗೀಕರಿಸಿರುವುದು ಹೆಮ್ಮೆಯ ವಿಷಯವಾಗಿದೆ.

ಇನ್ನೂ ಕರ್ನಾಟಕದ ಹೊರಭಾಗದಲ್ಲಿಯೂ ಸಹ ಇವರ ದೇವಾಲಯಗಳ ಕಡೆ ಗಮನಹರಿಸಿದಾಗ ಆಂಧ್ರದ ಮಹಬೂಬ್ ಮತ್ತು ಕರ್ನೂಲ್ ಜಿಲ್ಲೆಗಳಲ್ಲಿ ಪ್ರಮುಖವಾಗಿವೆ. ತುಂಗಭದ್ರೆಯ ದಕ್ಷಿಣ ತೀರದ ಮಹಾಬೂಬ್ ಜಿಲ್ಲೆಯ ಆಲಂಪುರದ ಜೋಗುಳಾಂಬಾ ದೇವಾಲಯವಿದ್ದು ಇದರ ಜೊತೆ ಪದಬ್ರಹ್ಮ, ಸ್ವರ್ಗಬ್ರಹ್ಮ, ಗರುಡ, ಬಾಲ, ವಿಶ್ವ, ವೀರ, ಆರ್ಕ, ಕೌಮಾರಿ ಮತ್ತು ತಾರಕ ಬ್ರಹ್ಮಗಳೆಂದು ಕರೆಯಲಾದ ಒಂಬತ್ತು ಗುಡಿಗಳಿವೆ. ಬಾಲಬ್ರಹ್ಮ ಜೀವಂತ ಗುಡಿಯನ್ನು ಚಾಲುಕ್ಯ ವಿಜಯಾದಿತ್ಯ ಕ್ರಿ.ಶ.708ರಲ್ಲಿ ಕಟ್ಟಿಸಿದ್ದರ ಉಲ್ಲೇಖವಿದೆ. ಸ್ವರ್ಗಬ್ರಹ್ಮ ಗುಡಿಯನ್ನು ಚಾಲುಕ್ಯ ವಿನಯಾದಿತ್ಯನ ಪಟ್ಟದ ರಾಣಿ ಕಟ್ಟಿಸಿದ್ದಾರೆ. ಒಟ್ಟಾರೆಯಾಗಿ ಆಲಂಪುರದ ಈ ಆಲಯಗಳ ಲಕ್ಷಣಗಳು ವೈಶಿಷ್ಟ್ಯವಾಗಿದ್ದು ಸ್ಥೂಲಾಕಾಯದ ಪಾರ್ಶ್ವದಿಂದ ಕಾಣುವ ಉನ್ನತಿ, ಗರ್ಭಗೃಹ ಮತ್ತು ಮಂಟಪಗಳ ಸಾಲು ವಿಮಾನ ಮತ್ತು ಗೂಢ ಮಂಟಪಗಳನ್ನು ಸಮರೇಖೆಯಲ್ಲಿ ಕೂಡಿಸಿ ಸುಖನಾಸಿ ರೂಪ ಕೊಟ್ಟಿರುವುದು, ಶಿಲ್ಪಕಲೆಯ ಅಂತರ್ಭಾವ, ಗೋಡೆಗಂಬ, ಭಿತ್ತಿ ಮತ್ತು ಮಾಳಿಗೆಗಳ ರಚನೆಯಲ್ಲಿ (ಸಾಮರಸ) ವಾಸ್ತುತಂತ್ರಗಳನ್ನು ಐಹೊಳೆ, ಲಾಡಖಾನ್, ಕುಂತಿ,

ಹುಚ್ಚಮಲ್ಲಿ ಗುಡಿಗಳ ಮತ್ತು ಗುಹಾಲಯಗಳ ಶೈಲಿಯ ರೀತಿಯಲ್ಲಿ ಪರಿಣಾಮಕಾರಿಯಾಗಿ ಇಲ್ಲಿಯೂ ಕಾಣಿಸಿಕೊಂಡಿದೆ. ಅಲ್ಲದೇ ಪಾಪಾನಾಶದಲ್ಲಿ 22 ಗುಡಿಗಳು ಕರ್ನೂಲ್‌ನ ಸತ್ತವೋಲು, ಮಹಾನಂದಿ, ಪಂಚಲಿಂಗಾಲ, ಒಂಡಿ ತಾಂಡ್ರಪಾಡು ಗ್ರಾಮಗಳಲ್ಲಿ ಔತ್ತರೇಯ ದಾಕ್ಷಿಣಾತ್ಯ ಶಿಲ್ಪಗಳ ಮೇಳವಿಕೆಯನ್ನು ಕಾಣಬಹುದು.

**ಮಹಾಕೋಟೇಶ್ವರಾಲಯ ಮಹಾಕೂಟ;**

ಕ್ರಿ.ಶ.6ನೇ ಶತಮಾನದ ದೇವಾಲಯ ಇದರ ಜೊತೆ ಮಲ್ಲಿಕಾರ್ಜುನ ದೇವಾಲಯವಿದ್ದು ಎರಡು ಸಹ ಒಂದೇ ತರಹದ ಚೌಕಾಕಾರದ ಗುಡಿಗಳು. ಸಾಂಧಾರ ಗರ್ಭಗೃಹ, ಕಿರಿದಾದ ಮುಖಮಂಟಪ ಮತ್ತು ಅಗಲವಾದ ಸಭಾಮಂಟಪವಿದ್ದು ಪ್ರತ್ಯೇಕವಾದ ನಂದಿಮಂಟಪವಿದೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವಿದೆ. ಈ ದೇವಾಲಯದ ಎತ್ತರವಾದ ಅಧಿಷ್ಠಾನದ ಅಡ್ಡಪಟ್ಟಿಗಳನ್ನು ಶೈವ, ಪುರಾಣ ಕಥಾನಕ ಶಿಲ್ಪಗಳು, ಲೌಕಿಕ ವಿಷಯ ಶಿಲ್ಪಗಳು, ಭಿತ್ತಿಯಲ್ಲಿ ಕೋಷ್ಠಗಳಲ್ಲಿ ಶೈವ ದ್ವಾರಪಾಲಕರು, ಶಿವಗಣಗಳು, ಶಿವ, ಅರ್ಧನಾರೀಶ್ವರ, ವಿಷ್ಣು ಮುಂತಾದ ದೇವತಾ ವಿಗ್ರಹಗಳಿವೆ. ಮಹಾಕೂಟೇಶ್ವರದ ಮುಂದೆ ನಿಲ್ಲಿಸಲಾಗಿದ್ದ ಚಾಲುಕ್ಯನ ಮಂಗಲೇಶನ ಕ್ರಿ.ಶ.528ರ ಶಾಸನಸ್ತಂಭ ಈಗ ಬಿಜಾಪುರದ ಪುರಾತತ್ವ ಮತ್ತು ವಸ್ತುಸಂಗ್ರಹಾಲಯದಲ್ಲಿದೆ. ಈ ದೇವಾಲಯದ ಇನ್ನೊಂದು ಕಂಬದ ಮೇಲೆ ಚಾಲುಕ್ಯ ವಿಜಯಾದಿತ್ಯನ ಪ್ರಾಣವಲ್ಲಭೆ ವಿನಾ ಪೋಟಿಯ ಶಾಸನವಿದೆ.

ಇವುಗಳನ್ನೆಲ್ಲಾ ಗಮನಿಸಿದಾಗ ಬಾದಾಮಿ ಚಾಲುಕ್ಯರು ಭಿನ್ನ ಭಿನ್ನ ಮಾರ್ಗಗಳನ್ನು ಅನ್ವೇಷಿಸಿ ವಿವಿಧ ಶೈಲಿಗಳನ್ನು ರೂಪಿಸಲು ಯತ್ನಿಸಿದ್ದಾರೆ. ಈ ದೃಷ್ಟಿಯಲ್ಲಿ ಐಹೊಳೆ ವಾಸ್ತುಶಿಲ್ಪದಲ್ಲಿ ತರಬೇತಿ ಶಾಲೆ ಎಂದು ಪರಿಗಣಿಸಬಹುದು. ಆರಂಭ ಘಟ್ಟಕ್ಕೆ ಸೇರಿದ ಕೊಂತಿ ಲಾಡಖಾನ್ ವಿಕಸನದ ಹಂತಕ್ಕೆ ಸೇರಿದ ಹುಚ್ಚುಮಲ್ಲಿ ಗುಡಿ, ಮಹಾಕೂಟದ ಮಹಾಕೂಟೇಶ್ವರ, ಬಾದಾಮಿಯ ಮಾಲಗಿತ್ತಿ ಆಲಯಗಳು ಬೆಳವಣಿಗೆಯ ಹಂತಗಳನ್ನು ನಿರೂಪಿಸುವ ಮಾದರಿಗಳಾಗಿವೆ. ನಾಗರ ಶೈಲಿಯಾಗಲೀ, ದ್ರಾವಿಡ ಶೈಲಿಯಾಗಲೀ ಬೆಳವಣಿಗೆಯನ್ನು ಈ ಪರಿಸರದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಪಟ್ಟದಕಲ್ಲು ಆಲಂಪುರಗಳು ಈ ದೃಷ್ಟಿಯಲ್ಲಿ ವಿಕಸನಗೊಂಡು ಬಾದಾಮಿ ಚಾಲುಕ್ಯರ ದೇವಾಲಯಗಳ ಪ್ರದರ್ಶನ ಶಾಲೆಗಳೆನ್ನಬಹುದು. ಹೀಗಾಗಿ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಬುನಾದಿ ಹಾಕಿ ಅದು ಮುಂದೆ ಈ ಪರಿಯ ಕಲಾ ಬೆಳವಣಿಗೆ ಉನ್ನತ ಮಟ್ಟ ಮುಟ್ಟುವುದಕ್ಕೆ ಕಾರಣವಾಗಿದೆ.



**ಲಾಡಖಾನ್ ದೇವಾಲಯ**



**ದುರ್ಗಾ ದೇವಾಲಯ: ಐಹೊಳೆ**



**ವಿರೂಪಾಕ್ಷ ದೇವಾಲಯ: ಪಟ್ಟದಕಲ್ಲು**



**ಮಹಾಕೋಟೇಶ್ವರಾಲಯ :ಮಹಾಕೂಟ**

## ಪರಾಮರ್ಶನ ಗ್ರಂಥಗಳು

1. ಸಾ ಕೃ, ರಾಮಚಂದ್ರರಾವ್, ಭಾರತದ ದೇವಾಲಯ ನೆಲೆ–ಹಿನ್ನಲೆ, ಸುರಮಾ ಪ್ರಕಾಶನ, ಬೆಂಗಳೂರು–11, 2010.
2. ಜಿ ಮನೋಜ್, ದೇವಾಲಯ ವಾಸ್ತು ವಿಜ್ಞಾನ, ಸುಭೋಧಿನಿ ಬುಕ್ ಪಬ್ಲಿಷರ್ , ಚಿತ್ರದುರ್ಗ, 2015. ಅಪರ್ಣ ಕೂ.ಸ. ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.

3. ರಾಮಚಂದ್ರರಾವ್. ಎಸ್. ಕೆ. ಕನ್ನಡ ನಾಡಿನ ಧಾರ್ಮಿಕ ಪರಂಪರೆ, ಕನ್ನಡ ಮತ್ತು ಸಂಸ್ಕೃತಿ ನೀರ್ದೆಶನಾಲಯ, ಬೆಂಗಳೂರು, 1983.
4. ಶಿವರಾಮ ಕಾರಂತ, ಚಾಲುಕ್ಯ ವಾಸ್ತು ಶಿಲ್ಪ, ಲಲಿತಕಲಾ ಅಕಾಡೆಮಿ ಬೆಂಗಳೂರು, 1969.
5. ಎ.ವಿ. ನರಸಿಂಹ ಮೂರ್ತಿ, ಚಾಲುಕ್ಯ ವಾಸ್ತು ಶಿಲ್ಪ ಪರಿಚಯ, ಕನ್ನಡ ಮತ್ತು ಸಂಸ್ಕ್ರತಿ ನಿರ್ದೇಶನಾಲಯ, ಬೆಂಗಳೂರು, 1984.
6. ರಿಯಾ ಅಲೆಗ್ಸಾಂಡರ್, ಚಾಲುಕ್ಯನ್ ಅರ್ಕಿಟೆಕ್ಚರ್, ದೆಹಲಿ, 1970
7. ಡಾ. ಬಾ.ರಾ ಗೋಪಾಲ್, ಕರ್ನಾಟಕದ ಕಲೆಗಳು, ವಾಸ್ತು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,
8. ಇತಿಹಾಸ ಮತ್ತು ಪುರಾತತ್ವ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,2009.
9. ಶಿವರುದ್ರ ಸ್ವಾಮಿ.ಎಸ್ ಎನ್. ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪೌರಸ್ತ್ಯ ಪ್ರಕಾಶನ, ತಿಪಟೂರು,2000.
10. Banarjee, J.N., **The Development of Hindu Iconography**, Calcutta, 1956.
11. Banarjee, J.N., **Religion in Art and Archaeology, Vaishnavism and Saivism**, Lucknow, 1968.
12. Banarjee, J.N., **The Development of Hindu Iconography, Third Revised Edition** Calcutta, 1956.
13. Gopinath Rao, T.V., **Elements of Hindu Iconography**, Vol.-I, II & III, Delhi (Reprint), 1977.